# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 173 (196) |
| ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 28-01-2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ಸಬ್-ರಿಜಿಸ್ಟ್ರಾರ್ (ಉಪ ನೋಂದಣಾಧಿಕಾರಿ) ಹುದ್ದೆಗಳ ಸಂಖ್ಯೆ ಎಷ್ಟು; ಮತ್ತು ಖಾಲಿ ಇರುವ ಸಬ್-ರಿಜಿಸ್ಟ್ರಾರ್ ಹುದ್ದೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟು 186 ಉಪ ನೋಂದಣಾಧಿಕಾರಿ ಹುದ್ದೆಗಳು ಮಂಜೂರಾಗಿರುತ್ತದೆ.<br><br>ಖಾಲಿ ಇರುವ ಉಪ ನೋಂದಣಾಧಿಕಾರಿಗಳ ಹುದ್ದೆಗಳ ಒಟ್ಟು ಸಂಖ್ಯೆ: 38.<br><br>ಖಾಲಿ ಇರುವ ಉಪ ನೋಂದಣಿ ಕಛೇರಿಗಳಿಗೆ ವರ್ಗಾವಣೆ, ಮುಂಬಡ್ತಿ ಹಾಗೂ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಬೇಕಾಗಿರುವುದರಿಂದ ಜಿಲ್ಲಾವಾರು ಖಾಲಿ ಇರುವ ಉಪ ನೋಂದಣಾಧಿಕಾರಿ ಹುದ್ದೆಗಳ ವಿವರವನ್ನು ನೀಡಲು ಕಷ್ಟಕರವಾಗಿರುತ್ತದೆ.<br><br>ಇಲಾಖೆಯಲ್ಲಿ ಖಾಲಿ ಇರುವ ಹಿರಿಯ/ ಉಪನೋಂದಣಾಧಿಕಾರಿಗಳ ಕಛೇರಿಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ. |
| ಆ) | ಖಾಲಿ ಹುದ್ದೆಗಳಿಗೆ ಸರ್ಕಾರ ಅಂತಿಮವಾಗಿ ಯಾವ ವರ್ಷದಲ್ಲಿ ನೇಮಕಾತಿ ಮಾಡಿಕೊಂಡಿರುತ್ತದೆ; | ಕರ್ನಾಟಕ ಲೋಕಸೇವಾ ಆಯೋಗ ಇವರ ಅಧಿಸೂಚನೆ ಸಂಖ್ಯೆ: PSC/16/RT(4) B/2016, ದಿನಾಂಕ:09-01-2019 ರನ್ವಯ ಒಟ್ಟು 64 ಹುದ್ದೆಗಳನ್ನು ಇಲಾಖೆಯಲ್ಲಿ ಭರ್ತಿ ಮಾಡಿಕೊಳ್ಳಲಾಗಿರುತ್ತದೆ. |
| ಇ) | ಖಾಲಿ-ಇರುವ ಸಬ್-ರಿಜಿಸ್ಟ್ರಾರ್ ಹುದ್ದೆಗಳ ನೇಮಕಾತಿಗೆ ಸರ್ಕಾರದ ಮುಂದಿರುವ ಕ್ರಮವೇನು ಹಾಗೂ ಎಷ್ಟು ಹುದ್ದೆಗಳ ನೇಮಕಾತಿಗೆ ಸರ್ಕಾರ ಸಿದ್ಧವಿದೆ; | ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ನೇರ ನೇಮಕಾತಿ ಖೋಟಾದಲ್ಲಿ-26 ಮತ್ತು ಮುಂಬಡ್ತಿ ಖೋಟಾದಲ್ಲಿ -12 ಉಪ ನೋಂದಣಾಧಿಕಾರಿ ಹುದ್ದೆಗಳು ಖಾಲಿ ಇರುತ್ತವೆ.<br><br>ನೇರ ನೇಮಕಾತಿ ಕೋಟಾದಡಿಯಲ್ಲಿ ಖಾಲಿ ಇರುವ 26 ಉಪ ನೋಂದಣಾಧಿಕಾರಿ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿ ಮೂಲಕ ಭರ್ತಿಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಲಾಗಿರುತ್ತದೆ.<br><br>ಆರ್ಥಿಕ ಇಲಾಖೆಯ ಸಹಮತಿ ನೀಡಿದ ನಂತರ ನಿಯಮಾನುಸಾರ ಕ್ರಮವಹಿಸಲಾಗುವುದು. |
| ಈ) | ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆ.ಪಿ.ಎಸ್.ಸಿ) ವಿಳಂಬ ಧೋರಣೆ, ಪಾರದರ್ಶಕತೆಯ ಕೊರತೆಯಿರುವುದರಿಂದ ಸಬ್-ರಿಜಿಸ್ಟ್ರಾರ್ ನೇಮಕಾತಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆ.ಇ.ಎ) ವಹಿಸುವ ಚಿಂತನೆ ಸರ್ಕಾರದ ಮುಂದಿದೆಯೇ? | |

**ಕಂಇ/29/ಎಂಎನ್ಎಸ್ಎ/2026**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

# ಅನುಬಂಧ

## ಹಿರಿಯ/ಉಪ ನೋಂದಣಾಧಿಕಾರಿಗಳ ಖಾಲಿ ಇರುವ ಕಛೇರಿಗಳ ವಿವರ

| ಕ್ರ.ಸಂ | ಜಿಲ್ಲೆ | ಖಾಲಿ ಇರುವ ಹಿರಿಯ/ ಉಪನೋಂದಣಾಧಿಕಾರಿ ಹುದ್ದೆಗಳ ಕಛೇರಿಯ ಸಂಖ್ಯೆ |
|---|---|---|
| 1 | ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ | 3 |
| 2 | ಬಾಗಲಕೋಟೆ | 1 |
| 3 | ಬೆಳಗಾವಿ | 4 |
| 4 | ಬೀದರ್ | 3 |
| 5 | ವಿಜಯಪುರ | 2 |
| 6 | ಚಿತ್ರದುರ್ಗ | 3 |
| 7 | ಚಿಕ್ಕಮಗಳೂರು | 2 |
| 8 | ದಕ್ಷಿಣ ಕನ್ನಡ (ಮಂಗಳೂರು) | 2 |
| 9 | ದಾವಣಗೆರೆ | 1 |
| 10 | ಗದಗ | 1 |
| 11 | ಹಾಸನ | 5 |
| 12 | ಕಲಬುರಗಿ | 4 |
| 13 | ಕೊಡಗು | 3 |
| 14 | ಕೊಪ್ಪಳ | 4 |

| | | |
|---|---|---|
| 15 | ಮೈಸೂರು | 2 |
| 16 | ಶಿವಮೊಗ್ಗ | 3 |
| 17 | ರಾಯಚೂರು | 3 |
| 18 | ಉಡುಪಿ | 4 |
| 19 | ಕಾರವಾರ/ಉತ್ತರ ಕನ್ನಡ | 6 |
| 20 | ತುಮಕೂರು | 4 |
| 21 | ಮಂಡ್ಯ | 1 |
| 22 | ಯಾದಗಿರಿ | 1 |
| **ಒಟ್ಟು** | | **62** |